# ಸಾಫ್ಟ್‌ವೇರ್‌ನಿಂದ ಸ್ಯಾಂಡಲ್‌ವುಡ್‌ಗೆ

# ರವೀಕ್ಷಾ

**ಸಾಫ್ಟ್‌ವೇರ್ ಕ್ಷೇತ್ರದಿಂದ ಸಿನಿಮಾರಂಗದೆಡೆಗೆ ಹಾದಿ ಹೊರಳಿಸಿರುವ ನಟಿ ರವೀಕ್ಷಾ ಶೆಟ್ಟಿ ಅವರಿಗೆ ಹೊಸ ಹೊಸ ಪಾತ್ರಗಳ ಮೂಲಕ ತಮ್ಮನ್ನು ಪ್ರಸ್ತುತಪಡಿಸಿಕೊಳ್ಳುವ ಹಂಬಲ.**

**■ ಸುಮಲತಾ ಎನ್.**



ಸಾಫ್ಟ್‌ವೇರ್ ಕ್ಷೇತ್ರ ಬಿಟ್ಟು ಚಿತ್ರರಂಗದ ದಾರಿ ಹಿಡಿದಿರುವ ನಟಿ ರವೀಕ್ಷಾ ಶೆಟ್ಟಿ ಮೂಲತಃ ಮೈಸೂರಿನವರು. ಮೈಸೂರಿನಲ್ಲಿ ಹುಟ್ಟಿ ಬೆಳೆದು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಅವರಿಗೆ ನಟನೆಯ ನಂಟು ಹತ್ತಿದ್ದು, ಪುಟ್ಟ ಹುಡುಗಿಯಾಗಿದ್ದಾಗ ನಾಟಕಗಳಿಗೆ ಬಣ್ಣ ಹಚ್ಚಿದ್ದ ದಿನಗಳಿಂದ.

ಚಿಕ್ಕಂದಿನಿಂದಲೂ ಬೆಂಬಿಡದೇ ಕಾಡುತ್ತಿದ್ದ ನಟನೆಯೆಡೆಗಿನ ಆಸಕ್ತಿ ಅವರನ್ನು ಸಾಫ್ಟ್‌ವೇರ್ ಕ್ಷೇತ್ರದಿಂದ ಸಿನಿಮಾರಂಗದೆಡೆಗೆ ಬರಲು ಪ್ರೇರೇಪಿಸಿತ್ತು. ಇದೀಗ 'ಸೀಟ್ ಎಡ್ಜ್' ಸಿನಿಮಾ ಮೂಲಕ ಚಿತ್ರರಂಗಕ್ಕೆ ಪರಿಚಿತಗೊಳ್ಳುತ್ತಿದ್ದು, ಇತರೆ ಮೂರು ಸಿನಿಮಾಗಳಲ್ಲಿಯೂ ತೊಡಗಿಕೊಂಡಿದ್ದಾರೆ.

ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಓದಿ ಮುಗಿಸಿದ ರವೀಕ್ಷಾ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ವೃತ್ತಿ ಆರಂಭಿಸಿದ್ದರು. ಅದರ ಜೊತೆಜೊತೆಗೆ ನಟನೆಗೆ ಬರುವ ಪ್ರಯತ್ನವೂ ಹಿನ್ನೆಲೆಯಲ್ಲೇ ಸಾಗಿತ್ತು. ಆ ಸಮಯದಲ್ಲಿಯೇ ಸಿನಿಮಾಗಳಿಗೆ ಆಡಿಷನ್ ಕೊಡಲು ಶುರುಮಾಡಿದ್ದರು.

ಸಿನಿಮಾರಂಗದಲ್ಲಿ ಅವಕಾಶಗಳಿಗೆ ಎಡತಾಕಲು ಆರಂಭಿಸಿದ ಮೇಲೆ ಉತ್ತಮ ಸಿನಿಮಾವೊಂದು ರವೀಕ್ಷಾಗೆ ಒಲಿದುಬಂದಿತ್ತು. ದುರದೃಷ್ಟವಶಾತ್ ಅದೇ ಸಮಯದಲ್ಲಿ ಸಂಭವಿಸಿದ ಅಪಘಾತದ ಕಾರಣವಾಗಿ ದೊಡ್ಡ ಪ್ರಾಜೆಕ್ಟ್ ಕೈ ತಪ್ಪಿತು. ಆದರೆ ನಿರ್ಧಾರ ಬದಲಿಸದೇ ಮತ್ತೆ ಪ್ರಯತ್ನ ಮುಂದುವರೆಸಿದರು.

'ನಾನು ಸಿನಿಮಾವನ್ನು ಗಂಭೀರವಾಗಿ ಪರಿಗಣಿಸಿ ಪ್ರಯತ್ನಿಸಲು ಆರಂಭಿಸಿದ ಮೇಲೆ ಲಾಕ್‌ಡೌನ್ ವಿಧಿಸಲಾಯಿತು. ಕಮಿಟ್ ಆದ ಎಷ್ಟೋ ಪ್ರಾಜೆಕ್ಟ್‌ಗಳು ಏನೇನೋ ಕಾರಣಗಳಿಂದ ನಿಂತುಹೋದವು. ತುಂಬಾ ಕಷ್ಟ ಅನ್ನಿಸುತ್ತಿತ್ತು. ಆದರೆ ಮನಸ್ಸು ಬದಲಿಸಲಿಲ್ಲ. ಇಲ್ಲೇ ಉಳಿಯಬೇಕೆಂಬ ದೃಢ ನಿರ್ಧಾರ ಮಾಡಿದೆ' ಎಂದು ನೆನಪಿಸಿಕೊಳ್ಳುತ್ತಾರೆ ಅವರು.

'ಸಿನಿಮಾರಂಗದಲ್ಲಿ ಸ್ಪರ್ಧೆಯೂ ಹೆಚ್ಚಿದೆ. ಹೊಸಬರಿಗೆ ಒಳ್ಳೆಯ ತಂಡ ಸಿಗುವುದೂ ಕಷ್ಟವೇ' ಎಂದು ಸಿನಿಮಾರಂಗಕ್ಕೆ ಹೊಸದಾಗಿ ಬರುವವರಿಗೆ ಎದುರಾಗುವ ಸವಾಲುಗಳ ಬಗ್ಗೆ ಮಾತನಾಡುತ್ತಾರೆ. ಈ ಸವಾಲುಗಳನ್ನು ಮೀರಿ, ತಮಗೆ ಸಿಗುವ ಅವಕಾಶಗಳನ್ನೇ ಸದುಪಯೋಗಪಡಿಸಿಕೊಳ್ಳಬೇಕು ಎಂಬುದು ಅವರ ಅನುಭವ.

'ಈಗ ಎಲ್ಲಾ ಸಿನಿಮಾಗಳಲ್ಲಿಯೂ ವರ್ಕ್‌ಶಾಪ್‌ಗಳನ್ನು ಮಾಡುತ್ತಾರೆ. ಇಲ್ಲಿ ಕಲಿಯಲು ಅವಕಾಶವಾಗುತ್ತದೆ. ಇದು ಕೂಡ ನಟನೆಯ ತರಬೇತಿಯಂತೆ ಬಹಳ ಸಹಾಯಕ' ಎಂದು ಹೇಳುವ ಅವರಿಗೆ, ತಾವು ನಿರ್ವಹಿಸುವ ಪಾತ್ರಗಳು ಜನರಿಗೆ ಸ್ಫೂರ್ತಿ ತುಂಬುವಂತಿರಬೇಕು ಎಂಬ ಆಶಯ.

'ಹೀರೊಯಿನ್ ಆಗಿ ಗುರುತಿಸಿಕೊಳ್ಳುವುದಕ್ಕಿಂತ ಯಾವುದೇ ಪಾತ್ರ ಕೊಟ್ಟರೂ ನಿಭಾಯಿಸಬಲ್ಲ ನಟಿ ಎಂದು ಕರೆಸಿಕೊಳ್ಳಬೇಕು. ಅದಕ್ಕೆ ಪೂರಕವಾಗುವಂಥ ಪಾತ್ರಗಳು ದೊರಕಬೇಕು ಎನ್ನುವ ರವೀಕ್ಷಾ ಶೆಟ್ಟಿ, 'ಪೀಟರ್', 'ಧರಣಿ', 'ಸೀಟ್ ಎಡ್ಜ್', 'ಮಾರಿಕಾ' ಎಂಬ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ■